**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 43/2025**

| | | |
|---|---|---|
| **ಸಾಕ್ಷಿದಾರರ ಹೆಸರು** | **ಃ ದೀಕ್ಷಿತ್** | **ಸಿ.ಡಬ್ಲ್ಯೂಃ 5** |
| **ತಂದೆಯ ಹೆಸರು** | **ಃ ದಿನೇಶ್** | **ಪಿ.ಡಬ್ಲೂಃ 5** |
| **ವಯಸ್ಸು** | **ಃ 24** | |
| **ಉದ್ಯೋಗ** | **ಃ ಕೃಷಿ** | |
| **ವಾಸಸ್ಥಳ** | **ಃ ತೆಕ್ಕೂರು, ಶೃಂಗೇರಿ ತಾಲ್ಲೂಕು** | |

**ದಿನಾಂಕಃ 07.07.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ಹಾಸನದಿಂದ ದಿನಾಂಕಃ 05.12.2024 ರಂದು ಬಾಳೆಹೊನ್ನೂರಿಗೆ ಬರುತ್ತಿರುವಾಗ ಚಾಸಾ-1 ರವರಿಗೆ ಫೋನ್ ಕರೆ ಮಾಡಿ ಬಾಳೆಹೊನ್ನೂರಿನಲ್ಲಿ ಊಟಕ್ಕೆ ಜೊತೆಗೆ ಬರುವುದಾಗಿ ತಿಳಿಸಿದೆ. ರಾತ್ರಿ ಸುಮಾರು 9.30 ಗಂಟೆಗೆ ನಾನು ಬಾಳೆಹೊನ್ನೂರಿಗೆ ಬಂದ ನಂತರ ಸೌಂದರ್ಯ ಹೋಟೆಲ್ ಬಳಿ ನೋಡುವಾಗ್ಗೆ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡುತ್ತಿರುವುದು ಕಂಡು ಬಂತು. ನಾನು ಆಗ ಗಲಾಟೆಯನ್ನು ಬಿಡಿಸಲು ಹೋದೆ, ಆಗ ಆರೋಪಿತರು ಕಾಲಿನಿಂದ ನನ್ನ ಎದೆಗೆ ಒದ್ದರು ನಾನು ಕೆಳಕ್ಕೆ ಬಿದ್ದೆ. ತದನಂತರ ನಾವು ಚಿಕಿತ್ಸೆಗಾಗಿ ಬಾಳೆಹೊನ್ನೂರಿನ ಸರ್ಕಾರಿ ಆಸ್ಪತ್ರೆಗೆ ಹೋದೆವು.

ನಂತರ ದಿನಾಂಕಃ 06.12.2024 ರಂದು ಪೊಲೀಸರು ಕೃತ್ಯ ನಡೆದ ಸ್ಥಳ ಪಂಚನಾಮೆಗಾಗಿ ಸ್ಥಳಕ್ಕೆ ಆಗಮಿಸಿದರು. ಸದರಿ ಸಮಯದಲ್ಲಿ ಚಾಸಾ-4 ರವರು ಹಾಜರಿದ್ದರು. ನಂತರ ದಿನಾಂಕಃ 07.12.2024 ರಂದು ಪೊಲೀಸ್ ಠಾಣೆಗೆ ದೂರು ದಾಖಲು ಮಾಡಿದೆವು.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 05.12.2024 ರಂದು ಸೌಂದರ್ಯ ಹೋಟೆಲ್ ಬಳಿ ಆರೋಪಿತರು ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿತರು ಒಂದು ಬಿಯರ್ ಬಾಟಲಿನಿಂದ ಚಾಸಾ-4 ರವರಿಗೆ ಹಲ್ಲೆ ಮಾಡಿದರು ಎಂದರೆ ಸರಿ. ನಂತರ ದಿನಾಂಕಃ 06.12.2024 ರಂದು ಸ್ಥಳ ಮತ್ತು ಅಮಾನತು ಮಹಜರ್ ಕಾಲದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿ. ದಿನಾಂಕಃ 07.12.2024 ರಂದು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ನಾನು ನನ್ನ ಹೇಳಿಕೆ ನೀಡಿರುತ್ತೇನೆಂದರೆ ಸರಿ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ**

ನ್ಯಾಯಾಲಯದ ಸಮಯವಾದ್ದರಿಂದ ಪಾಟಿ ಸವಾಲಿಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**